

بِسْمِ اللّٰهِ الرَّحْمٰنِ الرَّحِيْم

# ಅಲ್ಲಾಹನಿಂದ ನೇರವಾಗಿ ಮಾರ್ಗದರ್ಶನ ಲಭಿಸುತ್ತಿರುವ ಅನೇಕರು ಜಮಾಅತ್ ಪ್ರವೇಶಿಸುತ್ತಿದ್ದಾರೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **15-09-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪಶ್ಚಿಮ ದೇಶಗಳ ಪತ್ರಿಕೆಗಳ ಮತ್ತು ಇತರ ಮಾಧ್ಯಮಗಳ ಪ್ರತಿನಿಧಿಗಳು ನಮ್ಮೊಂದಿಗೆ ಕೇಳುತ್ತಾರೆ, ನೀವು ಇಸ್ಲಾಮ್ ಧರ್ಮದ ಶಾಂತಿಪ್ರಿಯ ಉಪದೇಶಗಳ ಬಗ್ಗೆ ಮಾತನಾಡುತ್ತಿರುವಿರಿ, ಆದರೆ ಮುಸ್ಲಿಮರಲ್ಲಿ ಬಹುಸಂಖ್ಯಾತ ಜನರು ಇಂತಹ ಮಾತಗಳನ್ನಾಡುವುದಿಲ್ಲ. ಅವರು ನಿಮ್ಮನ್ನು ಮುಸ್ಲಿಮರೆಂದು ಭಾವಿಸುವುದೂ ಇಲ್ಲ. ನೀವು ಯಾವ ಇಸ್ಲಾಮೀ ಉಪದೇಶಗಳನ್ನು ಅನುಸರಿಸುವುದಾಗಿ ಹೇಳುತ್ತಿರುವಿರೋ ಆ ಉಪದೇಶಗಳನ್ನು ಅನುಸರಿಸಲು ಅವರನ್ನು ಹೇಗೆ ತಾನೆ ಒಪ್ಪುವಂತೆ ನೀವು ಮಾಡುವಿರಿ? ಇದಕ್ಕೆ ನಮ್ಮ ಉತ್ತರ ಯಾವಾಗಲೂ ಈ ರೀತಿ ಇರುತ್ತದೆ. ನಾವು ಇಸ್ಲಾಮಿನ ಉಪದೇಶಗಳೆಂದು ಪ್ರತಿಪಾದಿಸುವ ಎಲ್ಲವೂ ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳಿಂದ ನಾವು ಸಾಬೀತು ಗೊಳಿಸುತ್ತಿದ್ದೇವೆ. ನಮ್ಮ ಮಾತುಗಳು ಗಾಳಿ ಮಾತುಗಳಲ್ಲ. ಇಸ್ಲಾಮ್ ಧರ್ಮದ ಉಪದೇಶ ಯಾವಾಗಲೂ ಅಲ್ಲಾಹನ ಹಕ್ಕುಗಳಿಗೆ ಮತ್ತು ಅಲ್ಲಾಹನ ದಾಸರ ಹಕ್ಕುಗಳಿಗೆ ಸಂಬಂಧಿಸಿ ಹೀಗೆಯೇ ಇತ್ತು ಎಂದು ನಾವು ಸಾಬೀತುಗೊಳಿಸುತ್ತಿದ್ದೇವೆ. ಇತರ ಮುಸ್ಲಿಮರು ಈ ತತ್ವಗಳನ್ನು ಒಪ್ಪುವಂತೆ ಮಾಡುವುದು ಹೇಗೆ ಎಂಬ ಪ್ರಶ್ನೆಯ ಬಗ್ಗೆ ನಮ್ಮ ಉತ್ತರವೇನೆಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದಿರುವರು, ಮುಸ್ಲಿಮರು ಬಿಗಡಾಯಿಸುವ ಕಾಲಘಟ್ಟದಲ್ಲಿ ವಾಗ್ದತ್ತ ಮಹ್‌ದಿ ಮಸೀಹ್ ಆಗಮಿಸಿ ಮುಸ್ಲಿಮರನ್ನು ಸುಧಾರಣೆ ಮಾಡುವರು ಮತ್ತು ಲೋಕಕ್ಕೆ ಇಸ್ಲಾಮಿನ ನೈಜ ತತ್ವಗಳನ್ನು ತಲಪಿಸುವರು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಭವಿಷ್ಯವಾಣಿ ಬಹಳ ವೈಭವದಿಂದ ಈಡೇರಿದೆ. ಅಂತಹ ಪರಿಸ್ಥಿಯಲ್ಲಿ ಅಲ್ಲಾಹನು ವಾಗ್ದತ್ತ ಮಹ್‌ದಿ ಮಸೀಹರನ್ನು ಕಳುಹಿಸಿದನು. ಅವರು ಆಗಮಿಸಿ ನಮಗೆ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ವಾಸ್ತವಿಕ ತತ್ವಗಳನ್ನು ಕಲಿಸಿದರು. ಇಸ್ಲಾಮಿನ ಪ್ರತಿಯೊಂದು ಆಜ್ಞೆಯ ಜಾಣ್ಮೆಯನ್ನು ವಿವರಿಸಿದರು. ಹಝ್ರತ್ ಮಸೀಹ್ ಮೌಊದರನ್ನು ನಂಬಿದ ಅಹ್ಮದಿ ಮುಸ್ಲಿಮರಾದ ನಾವು ಅವರು ನೀಡಿದ ವಿವರಣೆಯ ಪ್ರಕಾರ ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಇಸ್ಲಾಮಿನ ನೈಜ ತತ್ವಗಳನ್ನು ವಿವರಿಸಿ ಕೊಡುತ್ತಿದ್ದೇವೆ. ನಮ್ಮ ಕೆಲಸ ಕೇವಲ ಸಂದೇಶ ತಲಪಿಸುವುದಾಗಿದೆ. ಅದನ್ನು ನಾವು ಮಾಡುತ್ತಿದ್ದೇವೆ. ಇನ್‌ಶಾಅಲ್ಲಾಹ್ ಮುಂದೆ ಸಹ ಈ ಕೆಲಸ ಮುಂದುವರಿಸುವೆವು.

ದೈವಿಕ ಜಮಾಅತ್‌ಗಳು ಕೆಲವು ದಿನಗಳೊಳಗೆ ಅಭಿವೃದ್ಧಿಗಳಿಸುವುದಿಲ್ಲ. ಅದು ಮೆಲ್ಲಮೆಲ್ಲಗೆ ಹಬ್ಬುತ್ತಾ ಅಭಿವೃದ್ಧಿ ಹೊಂದುತ್ತಾ ಇರುತ್ತದೆ. ನೀವು ಕೇಳುತ್ತಿರುವಿರಿ, ಅನ್ಯ ಮುಸ್ಲಿಮರು ನೀವು ಹೇಳುವ ತತ್ವಗಳನ್ನು ಅನುಸರಿಸುವಂತೆ ಹೇಗೆ ಮಾಡುವಿರಿ ಎಂದು. ನೋಡಿರಿ, ಈಗ ಅಹ್ಮದಿಯಾ ಜಮಾಅತ್ ಕೋಟಿಗಳಷ್ಟು ಜನ ಸಂಖ್ಯೆಯನ್ನು ಹೊಂದಿದೆ. ಅವರಲ್ಲಿ ಬಹುತೇಕ ಜನರು ಇತರ ಮುಸ್ಲಿಮ್ ಪಂಗಡಗಳಿಂದ ಬಂದವರಾಗಿದ್ದಾರೆ. ಜನರಿಗೆ ಇಸ್ಲಾಮಿನ ನೈಜ ತತ್ವಗಳು ಸ್ಪಷ್ಟವಾಗುತ್ತಾ ಇರುವಾಗ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳ ಬಗ್ಗೆ ಅರಿವುಂಟಾಗುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನೂ ಭವಿಷ್ಯವಾಣಿಗಳನ್ನೂ ಮನವರಿಕೆ ಮಾಡುತ್ತಾ ಇರುವಾಗ ಹೆಚ್ಚಾಗಿ ಮುಸ್ಲಿಮರಿಂದ ಮತ್ತು ಇತರ ಧರ್ಮಗಳಿಂದ ಸಹ ಜನರು ಈ ಜಮಾಅತಿಗೆ ಸೇರುತ್ತಾ ಇದ್ದಾರೆ. ಇನ್‌ಶಾಅಲ್ಲಾಹ್ ಈಗ ಅಲ್ಪಸಂಖ್ಯಾತರಾಗಿರುವ ಈ ಜಮಾಅತ್ ಬಹುಸಂಖ್ಯಾತರರಾಗಿ ಮಾರ್ಪಡುವುದು. ಇದು ಅಲ್ಲಾಹನ ವಾಗ್ದಾನವಾಗಿದೆ. ಇದರ ಸೂಚನೆಗಳನ್ನು ನಾವು ಪ್ರತಿದಿನ ಕಾಣುತ್ತಿದ್ದೇವೆ. ಪ್ರತಿವರ್ಷ ಲಕ್ಷಗಟ್ಟಲೆ ಜನರು ಈ ಜಮಾಅತಿಗೆ ಸೇರುತ್ತಿದ್ದಾರೆ. ಅವರಲ್ಲಿ ಬಹುತೇಕ ಜನರು ಮುಸ್ಲಿಮರೇ ಆಗಿದ್ದಾರೆ. ನಮ್ಮ ಬಳಿ ಸಂಪನ್ಮೂಲಗಳ ಕೊರತೆ ಇದೆ. ಮುಬಲ್ಲಿಗರ ಸಂಖ್ಯೆ ಬಹಳ ಕಡಿಮೆ ಇದೆ. ಹೀಗಿದ್ದರೂ ಅಲ್ಲಾಹನು ಅಸಾಧಾರಣ ಪರಿಣಾಮಗಳನ್ನು ದಯಪಾಲಿಸುತ್ತಿದ್ದಾನೆ. ಕೆಲವರಿಗೆ ಅಲ್ಲಾಹನೇ ಸ್ವತಃ ಮಾರ್ಗದರ್ಶನ ನೀಡುತ್ತಿದ್ದಾನೆ. ಅನೇಕ ಜನರಿಗೆ ಸ್ವಪ್ನಗಳ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಮತ್ತು ಜಮಾಅತಿನ ಬಗ್ಗೆ ತಿಳಿಯಿತು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ ಸ್ಪಷ್ಟವಾಗಿ ತಿಳಿಯಿತು. ಕೆಲವರಿಗೆ ಮೊದಲು ಜಮಾಅತಿನ ಬಗ್ಗೆ ಮಾಹಿತಿ ದೊರಕುತ್ತದೆ. ಅವರು ಇಸ್ತಿಖಾರ ಪ್ರಾರ್ಥನೆ ಮಾಡುತ್ತಾರೆ. ಅನಂತರ ಅಲ್ಲಾಹನಿಂದ ಮಾರ್ಗದರ್ಶನ ಪಡೆದು ಜಮಾಅತಿಗೆ ಸೇರುತ್ತಾರೆ. ಕೆಲವರು ತಬ್ಲೀಗನ್ನು ಆಲಿಸುತ್ತಾರೆ. ನಮ್ಮ ಮುಬಲ್ಲಿಗ್, ಮುಅಲ್ಲಿಮ್, ದಾಯಿಯಾನ್, ಜೊತೆಗೆ ರೇಡಿಯೋ, ಟೆಲಿವಿಶನ್ ಚ್ಯಾನಲ್‌ಗಳು ಈ ತಬ್ಲೀಗ್ ಕೆಲಸ ಮಾಡುತ್ತಿವೆ. ಅವುಗಳ ಮೂಲಕ ಸಂದೇಶ ತಲಪಿದವರ ಹೃದಯಗಳನ್ನು ಅಲ್ಲಾಹನು ತೆರೆಯುತ್ತಾನೆ. ಕೆಲವು ಜನರು ಜಮಾಅತಿನ ವಿರೋಧಿಗಳ ಕೆಟ್ಟ ಅಂತಿಮಗತಿಯನ್ನು ಕಂಡು ಜಮಾಅತಿಗೆ ಸೇರುತ್ತಾರೆ. ಕೆಲವರಿಗೆ ಅಲ್ಲಾಹನು ದೃಷ್ಟಾಂತಗಳನ್ನು ತೋರಿಸುತ್ತಾನೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿರುವನು: **ಮೈಂ ತುಜೇ ಇಝ್ಝತ್ ದೂಂಗಾ ಔರ್ ಬಢಾಊಂಗ.** (ನಾನು ನಿನಗೆ ಗೌರವ ನೀಡುವೆನು ಮತ್ತು

ವರ್ಧಿಸುವೆನು.) **ಲಾ ಮುಬದ್ದಿಲ ಲಿ ಕಲಿಮಾತಿಹೀ.** (ಅಲ್ಲಾಹನ ವಾಗ್ದಾನಗಳನ್ನು ತಡೆಗಟ್ಟುವವನು ಯಾರೂ ಇಲ್ಲ).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಅಭಿವೃದ್ಧಿಗೊಳ್ಳುವ ಬಗ್ಗೆ ಅನೇಕ ಇಲ್‌ಹಾಮ್‌ಗಳಿವೆ. ಅಲ್ಲಾಹನು ಹೀಗೆ ಹೇಳಿದನು: **ಮೈಂ ತರಖ್ಖೀ ದೂಂಗಾ. ತೇರೆ ಮುಹಿಬ್ಬೋಂ ಕಾ ಗುರೂಹ್ ಬಢಾಊಂಗಾ.** (ನಾನು ನಿನಗೆ ಅಭಿವೃದ್ಧಿಯನ್ನು ನೀಡುವೆನು. ನಿನ್ನನ್ನು ಪ್ರೀತಿಸುವವರ ಗುಂಪನ್ನು ವರ್ಧಿಸುವೆನು). ಏಕನಾಗಿದ್ದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಈಗ ಲೋಕವಿಡೀ ಹಬ್ಬಿದೆ. ಪ್ರತಿದಿನ ಅದು ವರ್ಧಿಸುತ್ತಿದೆ. ಪ್ರತಿದಿನ ಹೊಸ ಹೊಸ ಜನರು ಜಮಾಅತಿಗೆ ಸೇರುತ್ತಿದ್ದಾರೆ. ಅಲ್ಲಾಹನು ಹೇಗೆ ಮಾರ್ಗಗಳನ್ನು ತೆರೆಯುತ್ತಾನೆ, ಅಲ್ಲಾಹನು ಹೇಗೆ ಜನರಿಗೆ ಮಾರ್ಗದರ್ಶನ ನೀಡುತ್ತಾನೆ, ಇವುಗಳಿಗೆ ಸಂಬಂಧಿಸಿ ಕೆಲವು ಘಟನೆಗಳನ್ನು ಈಗ ನಾನು ವಿವರಿಸುವೆನು. ಸ್ವಪ್ನಗಳ ಮೂಲಕ ಅಹ್ಮದಿಯರಾದ ಕೆಲವರಿಗೆ ಸಂಬಂಧಿಸಿದ ಕೆಲವು ಸಂಭವಗಳು.

ಖಾಝಾನ್‌ನಿಂದ ನಮ್ಮ ಮುಬಲ್ಲಿಗ್ ಬರೆಯುತ್ತಾರೆ: ಒಬ್ಬ ವ್ಯಕ್ತಿಯೊಂದಿಗೆ ತಬ್‌ಲೀಗ್ ನಡೆಯುತ್ತಿತ್ತು. ಪ್ರಶ್ನೋತ್ತರಗಳು ಜಾರಿಯಲ್ಲಿತ್ತು. ಸ್ವಲ್ಪ ಸಮಯದ ನಂತರ ಆ ವ್ಯಕ್ತಿ ಬೈಅತ್ ಮಾಡಿದರು. ತಾನು ಬೈಅತ್ ಮಾಡಿದ ಬಗ್ಗೆ ವಿವರಿಸುತ್ತಾ ಆ ವ್ಯಕ್ತಿ ಹೇಳಿದರು: ಸ್ವಪ್ನದಲ್ಲಿ ನಾನು ಸಿರಿಯಾದಲ್ಲಿ ಇರುವುದಾಗಿ ಕಂಡೆನು. ಅಲ್ಲಿ ಎರಡು ಗುಂಪುಗಳು ಪರಸ್ಪರ ಹೋರಾಡುತ್ತಿದ್ದುವು. ಆ ಸಮಯದಲ್ಲಿ ಒಂದು ಮೂರನೆಯ ಗುಂಪು ಅಲ್ಲಿಗೆ ಆಗಮಿಸಿ ಹೋರಾಡುತ್ತಿದ್ದ ಎರಡು ಗುಂಪುಗಳೊಂದಿಗೆ ಹೇಳಿತು: ನೀವು ಪರಸ್ಪರ ಹೋರಾಡಿ ದೌರ್ಜನ್ಯ ಮಾಡುತ್ತಿದ್ದೀರಿ. ನೀವು ಹೋರಾಟ ನಿಲ್ಲಿಸಿ ರಾಜಿಯಾಗಿರಿ. ಆ ಮೂರನೆಯ ಗುಂಪಿನ ಮಾತನ್ನು ಆಲಿಸಿ ಹೋರಾಡುತ್ತಿದ್ದ ಗುಂಪುಗಳು ಆಯುಧಗಳನ್ನು ಎಸೆದು ಪರಸ್ಪರ ಆಲಿಂಗಿಸಿದರು. ಆ ರಶ್ಯನ್ ವ್ಯಕ್ತಿ ರಾಜಿಮಾಡಿಸಿದ ಆ ಮೂರನೆಯ ಗುಂಪು ಯಾವುದೆಂದು ವಿಚಾರಿಸಿದಾಗ ಅದು ಅಹ್ಮದಿಯಾ ಜಮಾಅತಿನ ಜನರ ಗುಂಪೆಂದು ತಿಳಿಸಲಾಯಿತು. ಆ ರಶ್ಯನ್ ವ್ಯಕ್ತಿ ತನ್ನ ಇನ್ನೊಂದು ಸ್ವಪ್ನವನ್ನು ಹೀಗೆ ವಿವರಿಸಿದರು: ಅಲ್ಲಾಹನು ನನಗೆ ತೋರಿಸಿದನು ಮಳೆಗಾಲದ ಸಮಯವಾಗಿದೆ. ತಂಗಾಳಿ ಬೀಸುತ್ತಿದೆ. ನನಗೆ ಶಬ್ದ ಕೇಳಿಸಿತು: ಅಹ್ಮದಿಯ್ಯತ್ ಸರಿಯಾದ ವಿಶ್ವಾಸವಾಗಿದೆ. ಈ ಸ್ವಪ್ನಗಳನ್ನು ಕಂಡನಂತರ ನಾನು ಬೈಅತ್ ಮಾಡಿದೆ.

ಫ್ರಾನ್ಸಿನ ಒಬ್ಬ ಮಹಿಳೆ ಮಾಲಿಕ ಸಾಹಿಬ ತಾನು ಅಹ್ಮದಿಯಾದ ಬಗ್ಗೆ ಹೀಗೆ ವಿವರಿಸುತ್ತಾರೆ: ನನ್ನ ಮನೆಯಲ್ಲಿರುವವರಿಗೆಲ್ಲಾ ಅಹ್ಮದಿಯ್ಯತ್ತಿನ ಸಂದೇಶ ತಲಪಿತ್ತು. ಇಂತಿಂತಹ ವ್ಯಕ್ತಿಗಳಿಗೆ ಸ್ವಪ್ನದ ಮೂಲಕ ಅಲ್ಲಾಹನಿಂದ ಮಾರ್ಗದರ್ಶನ ಲಭಿಸಿತು ಅವರು ಜಮಾಅತಿಗೆ ಸೇರಿದರು ಎಂಬ ಮಾತುಗಳನ್ನು ನಾನು ಆಲಿಸುತ್ತಿದ್ದೆ. ಆಗ ನಾನು ಏನೂ ಹೇಳುತ್ತಿರಲಿಲ್ಲ. ಒಂದು ದಿನ ನಾನು ಅಲ್ಲಾಹನೊಂದಿಗೆ ಬೇಡಿಕೊಂಡೆನು. ಅಹ್ಮದಿಯ್ಯತ್ ನೇರವಾದ ಮಾರ್ಗವೋ ತಪ್ಪು ಮಾರ್ಗವೋ ಎಂಬುದನ್ನು ನನಗೆ ತಿಳಿಸಿಕೊಡು ಎಂದು ಪ್ರಾರ್ಥಿಸಿದೆ. ಮುಂದಿನ ಮೂರು ರಾತ್ರಿಗಳಲ್ಲಿ ಒಂದರ ನಂತರ ಇನ್ನೊಂದಾಗಿ ಮೂರು ಸ್ವಪ್ನಗಳನ್ನು ಅಲ್ಲಾಹನು ನನಗೆ ತೋರಿಸಿದನು. ಮೊದಲನೆಯ ಸ್ವಪ್ನದಲ್ಲಿ ಹೀಗೆ ಕಂಡೆನು: ಖಿಯಾಮತ್ ಸಂಭವಿಸಿದ ಹಾಗೆ ಎಲ್ಲ ಕಡೆಗಳಲ್ಲೂ ಅಸ್ತವ್ಯಸ್ತತೆಗಳನ್ನು ಕಂಡೆನು. ಆದರೆ ಅಹ್ಮದಿಯರಾಗಿದ್ದ ನನ್ನ ಸಹೋದರ ಸಹೋದರಿಯರು ಯಾವುದೇ ರೀತಿ ಗಾಬರಿಗೊಳ್ಳದೆ ಅತ್ಯಂತ ಸಂತೋಷಭರಿತರಾಗಿದ್ದಾರೆ. ಆದರೆ ನಾನು ಚೀರುತ್ತಾ ಗೋಳಾಡುತ್ತಿದ್ದೇನೆ. ಪರಿಸ್ಥಿತಿ ಬಹಳ ಗಾಬರಿ ಹುಟ್ಟಿಸುವುದಾಗಿದೆ ಎಂದು. ಆದರೆ ನನ್ನ ಅಹ್ಮದಿ ಸಹೋದರ ಸಹೋದರಿಯರು ಯಾವುದೇ ಗಾಬರಿ ಇಲ್ಲದೆ ಹೇಳುತ್ತಿದ್ದಾರೆ: ನಮಗೆ ಅಹ್ಮದಿಯಾ ಜಮಾಅತಿನ ಸಮ್ಮೇಳನಕ್ಕೆ ಹೋಗಲಿಕ್ಕಿದೆ. ನಾನು ಸ್ವಪ್ನದಲ್ಲಿ ಭಯಭೀತಳಾಗಿ ಅವರೊಂದಿಗೆ ಸೇರಿಕೊಂಡೆನು. ಎರಡನೆಯ ಸ್ವಪ್ನದಲ್ಲಿ ನಾನು ಹೀಗೆ ಕಂಡೆನು: ಅಹ್ಮದಿಯಾಗಿದ್ದ ನನ್ನ ಸಹೋದರಿ ಹೇಳುತ್ತಾಳೆ– ನೀನು ನಮಾಝ್ ಮಾಡು. ಇದೇ ಒಂದು ಮಾರ್ಗವಾಗಿದೆ. ಮೂರನೆಯ ಸ್ವಪ್ನದಲ್ಲಿ ನಾನು ಹೀಗೆ ಕಂಡೆನು, ನಾನು ನನ್ನ ಸಹೋದರ ಸಹೋದರಿಯರೊಂದಿಗೆ ಕುಳಿತಿದ್ದೇನೆ. ಆಗ ಅಲ್ಲಾಹನು ನನ್ನ ಕೈಯಲ್ಲಿ ಏನೋ ಬರೆದ ಹಾಗೆ ನನಗೆ ಅನುಭವವಾಯಿತು. ಈ ಸ್ವಪ್ನಗಳ ನಂತರ ನನಗೆ ಈ ಜಮಾಅತ್ ಸತ್ಯವಾದುದೆಂದು ಈ ಸ್ವಪ್ನಗಳು ಸೂಚಿಸುತ್ತವೆ ಎಂಬ ಹೃತ್ಪೂರ್ವಕ ನಂಬಿಕೆ ಉಂಟಾಯಿತು. ನಾನು ಬೈಅತ್ ಮಾಡಿದೆ. ಈಗ ಇಡೀ ಕುಟುಂಬ ಅಹ್ಮದಿಯ್ಯತ್‌ಗೆ ಪ್ರವೇಶಿಸಿದೆ.

ಅಬ್ದುಲ್ ಅಝೀಝ್ ತಿರಾವಡೆ ಸಾಹಿಬ್ ಐವರಿಕೋಸ್ಟ್ ದೇಶದ ಶೇಪೂ ಎಂಬ ಗ್ರಾಮದಲ್ಲಿ ಜಮಾಅತಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಹೇಳುತ್ತಾರೆ: ಒಬ್ಬ ವೃದ್ಧ ವ್ಯಕ್ತಿ ವಾಮಾರ ತಿರಾವಡೆ ಸಾಹಿಬ್ ಒಂದು ದಿನ ಸ್ವಪ್ನದಲ್ಲಿ ಹೀಗೆ ಕಂಡರು: ಅವರ ಗ್ರಾಮಕ್ಕೆ ಕೆಲವು ಅರಬಿಗಳು ಆಗಮಿಸಿದ್ದಾರೆ. ಆಗ ಕೆಲವರು ಹೇಳಿದರು, ಈ ಜನರು ಅಸಲಿ ಅರಬಿಗಳಲ್ಲ. ಅವರಿಂದ ದೂರವಿರಿ ಎಂದು ಹೇಳುತ್ತಿದ್ದರು. ಆಗ ಸ್ವಪ್ನದಲ್ಲಿ ನನಗೊಂದು ಶಬ್ದ ಕೇಳಿಸಿತು. ನೀವು ಅಲ್ಲಾಹನ ಸಾಮೀಪ್ಯ ಗಳಿಸಲು ಇಚ್ಛಿಸುವುದಾದರೆ ಈ ಜನರ ಮೂಲಕ ಗಳಿಸಿರಿ. ಈ ಸ್ವಪ್ನ ಕಂಡ ಕೆಲವು ದಿನಗಳ ನಂತರ ಅಹ್ಮದಿಯರ ಮುಬಲ್ಲಿಗ್ ನಮ್ಮ ಗ್ರಾಮಕ್ಕೆ ಬಂದರು. ಆಗ ಕೆಲವರು ಹೇಳಿದರು: ಇವರು ಮುಸ್ಲಿಮರಲ್ಲ. ಇವರಿಂದ ದೂರವಿರಬೇಕೆಂದು ನಮ್ಮ ಮೌಲವಿಗಳ ಫತ್ವ ಇದೆ. ಇದನ್ನು ಕಂಡಾಗ ವಾಮಾರ ಸಾಹಿಬರಿಗೆ ತನ್ನ ಸ್ವಪ್ನ ನೆನಪಿಗೆ ಬಂತು. ಅವರು ಅನಂತರ ಅಹ್ಮದಿಯ್ಯತ್‌ಗೆ ಪ್ರವೇಶಿಸಿದರು. ಅವರು ಐವರಿಕೋಸ್ಟ್‌ನ ವಾರ್ಷಿಕ ಸಮ್ಮೇಳನದಲ್ಲಿ ಉತ್ಸಾಹದಿಂದ ಭಾಗವಹಿಸಿದರು.

ಕಾಂಗೋ ಬ್ರಾಝ್‌ವೇಲ್‌ನಿಂದ ಬಶೀರ್ ಸಾಕಿಲ ಸಾಹಿಬ್ ಹೇಳುತ್ತಾರೆ: ನನಗೆ 2014ರಲ್ಲಿ ಇಲ್ಲಿನ ಜಲ್ಸ ಸಾಲಾನದಲ್ಲಿ ಭಾಗವಹಿಸುವ ಸಂದರ್ಭ ಲಭಿಸಿತ್ತು. ಹಝ್ರತ್ ಈಸಾ ಮೃತರಾಗಿರುವರು ಎಂಬುದು ಅಲ್ಲಿ ನನಗೆ ತಿಳಿಯಿತು. ಅವರು ಆಕಾಶದಿಂದ ಇಳಿದು ಬರಲಾರರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಮುಸ್ಲಿಮರು ಪಂಗಡಗಳಾಗಿ ವಿಭಜಿಸಲ್ಪಡುವರು. ಇಸ್ಲಾಮ್ ಕೇವಲ ನಾಮಮಾತ್ರವಾಗಿ ಬಾಕಿಯಾಗುವುದು. ಆ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸುವರು. ಅವರ ಜಮಾಅತ್ ಮಾತ್ರ ದೈವಿಕ ಮಾರ್ಗದರ್ಶನದಲ್ಲಿರುವುದು ಎಂದು ಹೇಳಿರುವರು. ಅದರ ನಂತರ ನಾನು ಅಹ್ಮದಿಯಾ

ಜಮಾಅತಿನ ಸಾಹಿತ್ಯಗಳನ್ನು ಓದಲು ಪ್ರಾರಂಭಿಸಿದೆ. ಆಗ ನನಗೆ ಅಹ್ಮದಿಯತ್ತಿನ ಸತ್ಯವನ್ನು ತಿಳಿಯಲು ಸಾಧ್ಯವಾಯಿತು. ನಾನೊಂದು ಸ್ವಪ್ನ ಸಹ ಕಂಡೆನು. ಒಬ್ಬ ವ್ಯಕ್ತಿ ನನಗೆ ಬಿಳಿ ಮತ್ತು ಗುಲಾಬಿ ಬಣ್ಣದ ಸುಂದರ ಪೋಷಾಕು ಕೊಡುತ್ತಿದ್ದಾರೆ. ಅನಂತರ ರಮಝಾನ್ ತಿಂಗಳಲ್ಲಿ ನಾನು ಇನ್ನೊಂದು ಸ್ವಪ್ನ ಕಂಡೆನು. ಅದರಲ್ಲಿ ನಾನೊಂದು ಅತ್ಯಂತ ಉತ್ತಮವಾದ ಬಸ್‌ನಲ್ಲಿ ಪ್ರಯಾಣ ಮಾಡುತ್ತಿರುವುದಾಗಿ ಕಂಡೆನು. ಈ ಸ್ವಪ್ನಗಳ ನಂತರ ನನಗೆ ಹೀಗೆ ಮನವರಿಕೆಯಾಯಿತು: ಬಸ್ ಎಂಬುದು ಪ್ರಯಾಣಕ್ಕಿರುವ ವಸ್ತುವಾಗಿರುವುದರಿಂದ ನಾನು ನಡೆಯುತ್ತಿರುವ ಮಾರ್ಗ ಬಹಳ ಶ್ರೇಷ್ಠ ಎಂದು ನಾನು ತಿಳಿದುಕೊಂಡೆನು. ಈ ಸ್ವಪ್ನದ ನಂತರ ನಾನು ಅಹ್ಮದಿಯತ್‌ಗೆ ಸೇರಿದೆ.

ಖಿರ್ಗಿಸ್ಥಾನದಲ್ಲಿ ಹೊಸದಾಗಿ ಬೈಅತ್ ಮಾಡಿ ಜಮಾಅತಿಗೆ ಸೇರಿದ ಅಶ್‌ಲನ್ ರಾಮೇಲ್ ಸಾಹಿಬ್ ಹೇಳುತ್ತಾರೆ: ನಾನು ಒಂದು ಮುಸ್ಲಿಮ್ ಕುಟುಂಬದಲ್ಲಿ ಜನಿಸಿದವನಾದ ಕಾರಣ ಇಸ್ಲಾಮ್ ನನಗೆ ಅಪರಿಚಿತವಲ್ಲ. ಆದರೆ ನಾನು ಧರ್ಮದ ಉದ್ದೇಶ ಲಕ್ಷ್ಯಗಳ ಬಗ್ಗೆ ಎಂದೂ ಯೋಚಿಸಲಿಲ್ಲ. ನಾನು ಕೆಲಸ ಮಾಡುವ ಸ್ಥಳದಲ್ಲಿ ಖಿರ್ಗಿಸ್ಥಾನದ ಅಹ್ಮದಿಯಾ ಜಮಾಅತಿನ ಸದರ್ ಸಾಹಿಬರನ್ನು ಬೇಟಿಯಾಗಿದ್ದೆ. ವಿವಿಧ ವಿಷಯಗಳ ಬಗ್ಗೆ ನಾವು ಚರ್ಚಿಸಿದೆವು. ಧರ್ಮಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಿದಾಗ ಇಸ್ಲಾಮ್ ಧರ್ಮದ ವಾಸ್ತವಿಕ ರೂಪದ ಬಗ್ಗೆ ಮೆಲ್ಲ ಮೆಲ್ಲಗೆ ತಿಳಿದುಕೊಳ್ಳಲು ನನಗೆ ಸಾಧ್ಯವಾಯಿತು. ಈಗಿನ ಕಾಲದ ಮುಸ್ಲಿಮರು ನೈಜ ಇಸ್ಲಾಮನ್ನು ಅನುಷ್ಠಾನಕ್ಕೆ ತರುತ್ತಾ ಇಲ್ಲ ಎಂದು ನನಗೆ ತಿಳಿಯಿತು. ಸದರ್ ಸಾಹಿಬರಿಂದ ನನ್ನ ಪ್ರಶ್ನೆಗಳಿಗೆ ಉತ್ತರ ಲಭಿಸಿತು. ನಾನು ಪವಿತ್ರ ಖುರ್‌ಆನನ್ನು ಮೊದಲನೆಯ ಸಲ ಓದಲು ಪ್ರಾರಂಭಿಸಿದೆ. ಅನಂತರ ಒಂದು ದಿನ ನಾನು ಬೈಅತ್ ಮಾಡಲು ತೀರ್ಮಾನಿಸಿದೆ. ನಾನು ಅದೇ ರಾತ್ರಿ ಒಂದು ಸ್ವಪ್ನ ಕಂಡೆನು. ನನ್ನ ತಂದೆಯವರ ಸ್ನೇಹಿತ ನನಗೆ ಒಂದು ಕಡೆಗೆ ಸೂಚಿಸಿ ಹೇಳಿದರು: ಅಲ್ಲೊಂದು ನಿಶಾನ್ ಇದೆ. ಅದರ ಬಗ್ಗೆ ಯಾರೊಂದಿಗೂ ಹೇಳಬೇಡ. ಏಕೆಂದರೆ ಭಯೋತ್ಪಾದಕರು ಬಂದು ಅದನ್ನು ನಾಶಮಾಡುವರು. ನಾನು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಒಂದು ದೊಡ್ಡ ತೋಟವಿತ್ತು. ಆ ತೋಟದಲ್ಲಿ ಚಿಟ್ಟೆಗಳ ಹಾಗಿರುವ ಜೀವಿಗಳು ಹಾರುತ್ತಿದ್ದುವು. ಆಗ ನಾನು ಯೋಚಿಸಿದೆ ಅಲ್ಲಾಹನ ಈ ನಿಶಾನಿಯನ್ನು (ಚಿಹ್ನೆಯನ್ನು) ಹೇಗೆ ತಾನೆ ಮರೆಮಾಡುವುದು? ಆಗ ನಾನು ಪಕ್ಷಿಗಳ ಹಾಗೆ ಹಾರಲು ತೊಡಗಿದೆ. ನಾನು ನನ್ನ ತಂದೆಯವರ ಸ್ನೇಹಿತರ ಮನೆಗೆ ಹಾರಿಹೋದೆನು. ಅವರು ಚಹಾ ಕುಡಿಯುತ್ತಿದ್ದರು. ಅವರು ನನ್ನನ್ನು ಪಕ್ಷಿ ಎಂದೇ ಭಾವಿಸುತ್ತಾರೆ. ನಾನು ಆಗ ಮೂರು ಸಾರಿ ಅಲ್ಲಾಹು ಅಕ್‌ಬರ್ ಎಂದು ಹೇಳಿದಾಗ ಅವರು ಗಾಬರಿಗೊಂಡರು. ಈ ಪಕ್ಷಿ ಹೇಗೆ ಮಾತನಾಡಿತು ಎಂದು ಯೋಚಿಸಿದರು. ನಾನು ಆಕಾಶದ ಕಡೆಗೆ ಹಾರಿದೆ. ನಾನು ಆಕಾಶದ ಕಡೆಗೆ ಹಾರಿದಾಗ ನಾನು ಪಕ್ಷಿಯಿಂದ ದೇವದೂತ (ಮಲಕ್) ಆಗಿ ಪರಿವರ್ತನೆ ಹೊಂದಿದೆನು. ಆಗ ನಾನು ಭೂಮಿಯ ಕಡೆಗೆ ನೋಡಿದಾಗ ಎಲ್ಲರೂ ಮೃತರಾದಂತೆ ಕಂಡೆನು. ಯಾರೂ ಜೀವಂತವಾಗಿ ಇಲ್ಲ. ನಾನು ನನ್ನ ಮನೆಗೆ ಹಾರಿಹೋದೆ. ಅನಂತರ ಮನೆಯೊಳಗೆ ಪ್ರವೇಶಿಸಿದಾಗ ನನಗೆ ಎಚ್ಚರವಾಯಿತು. ಈ ಸ್ವಪ್ನದ ನಂತರ ಅಲ್ಲಾಹನು ನನಗೆ ಆಧ್ಯಾತ್ಮಿಕ ಶಕ್ತಿ ನೀಡಿದುದಾಗಿ ಭಾಸವಾಯಿತು. ನಾನು ಬೈಅತ್ ಮಾಡಿದೆ ಮತ್ತು ಜಮಾಅತಿಗೆ ಸೇರಿದೆ.

ಈಜಿಪ್ಟ್ ದೇಶದ ಅಬ್ದುಲ್ ಹಾರೀ ಸಾಹಿಬ್ ಹೇಳುತ್ತಾರೆ: ಅಹ್ಮದಿಯ್ಯತ್ ಬಗ್ಗೆ ಪರಿಚಯ ಲಭಿಸುವುದಕ್ಕೆ ತುಂಬಾ ಸಮಯ ಮೊದಲು ನಾನು ಸ್ವಪ್ನದಲ್ಲಿ ಕಂಡೆನು, ನಾನೊಂದು ನಿರ್ಜನ ಮಾರ್ಗದಲ್ಲಿ ಯಾವುದೋ ಅಜ್ಞಾತ ಗುರಿಯ ಕಡೆಗೆ ಸಾಗುತ್ತಿದ್ದೇನೆ. ಆಗ ಒಬ್ಬ ಸಾತ್ವಿಕ ವ್ಯಕ್ತಿ ಬಂದು ನನ್ನನ್ನು ಆ ಮಾರ್ಗದಿಂದ ದೂರ ಸರಿಸಿ ಹೊಸ ಒಂದು ಮಾರ್ಗದಲ್ಲಿ ಸಾಗುವಂತೆ ಮಾಡುತ್ತಾರೆ. ಆಶ್ಚರ್ಯವೆಂಬಂತೆ ನಾನು ಯಾವುದೇ ಪ್ರತಿಭಟನೆ ಮಾಡದೆ ಅವರು ತೋರಿಸಿದ ಹೊಸ ಮಾರ್ಗದಲ್ಲಿ ಸಂತೋಷದಿಂದ ಚಲಿಸಲು ತೊಡಗಿದೆ. ಇದಕ್ಕೆ ಕಾರಣವೇನೆಂದರೆ ಆ ಸಾತ್ವಿಕ ವ್ಯಕ್ತಿಯ ಸಹಾನುಭೂತಿಯ ವರ್ತನೆಯಿಂದ ನನಗೆ ಖಚಿತವಾಗಿತ್ತು ಅವರು ನನ್ನನ್ನು ಕೆಟ್ಟ ಅಂತಿಮಗತಿಯಿಂದ ರಕ್ಷಿಸಿ ಒಳಿತಿನ ಮಾರ್ಗದಲ್ಲಿ ಚಲಿಸುವಂತೆ ಮಾಡುವರು ಎಂದು. ನಾನು ಹೊಸ ಮಾರ್ಗದಲ್ಲಿ ಸಾಗುತ್ತಾ ಒಂದು ಎತ್ತರವಾದ ಸ್ಥಳಕ್ಕೆ ತಲಪಿ ನಾನು ನಡೆಯುತ್ತಿದ್ದ ಹಳೆಯ ಮಾರ್ಗದ ಕಡೆಗೆ ಹಿಂದಿರುಗಿ ನೋಡಿದಾಗ ಅದರಲ್ಲಿ ಒಬ್ಬ ದೌರ್ಜನ್ಯಗಾರನು ಕೆಲವು ಜನರನ್ನು ಬಲಾತ್ಕಾರದಿಂದ ದುಡಿಸುವುದನ್ನು ಕಂಡೆನು. ಆಗ ನಾನು ಯೋಚಿಸಿದೆ, ಆ ಸಾತ್ವಿಕ ವ್ಯಕ್ತಿ ನನ್ನನ್ನು ಆ ಮಾರ್ಗದಿಂದ ದೂರ ಸರಿಸದಿರುತ್ತಿದ್ದರೆ ನಾನು ಸಹ ಅವರ ಹಾಗೆ ದೌರ್ಜನ್ಯಗಳಿಗೆ ಪಾತ್ರನಾಗುತ್ತಿದ್ದೆನು. ಸ್ವಪ್ನದಲ್ಲಿಯೇ ನಾನು ಯೋಚಿಸಿದೆ– ನಾನು ಕಂಡ ಸಾತ್ವಿಕ ವ್ಯಕ್ತಿ ಪ್ರಾಯಶಃ ಅಲ್ಲಾಹನ ಪ್ರವಾದಿ ಮೂಸಾ ಅಲೈಹಿಸ್ಸಲಾಮ್ ಆಗಿರಬಹುದು. ದೀರ್ಘ ಕಾಲದ ನಂತರ ನಾನು ಅಹ್ಮದಿಯಾ ಜಮಾಅತ್ ಬಗ್ಗೆ ಪರಿಚಯ ಗಳಿಸಿದೆ. ಆಗ ನನಗೆ ಮನವರಿಕೆ ಆಯಿತು, ನಾನು ಸಾಗುತ್ತಿದ್ದ ಮಾರ್ಗ ವಿನಾಶದ ಮಾರ್ಗವಾಗಿತ್ತು. ನನ್ನನ್ನು ರಕ್ಷಿಸಿದ ಸಾತ್ವಿಕ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದರು ಎಂದು ತಿಳಿಯಿತು. ನನಗೆ ದೊರೆತ ಹೊಸ ಮಾರ್ಗ ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮ್ ಆಗಿದೆ.

ನಾನು ಕೇವಲ ಕೆಲವು ಉದಾಹರಣೆಗಳನ್ನು ವಿವರಿಸಿದೆನು. ಕೆಲವು ಹಿಂದಿನ ರಶ್ಯನ್ ಒಕ್ಕೂಟದ ದೇಶಗಳಿಗೆ ಸೇರಿದವುಗಳಾಗಿವೆ. ಒಂದು ಯುರೋಪಿನದಾಗಿದೆ. ಒಂದು ಪಶ್ಚಿಮ ಆಫ್ರಿಕದ್ದು. ಇನ್ನೊಂದು ಸೆಂಟ್ರಲ್ ಆಫ್ರಿಕದ್ದು. ಇನ್ನೊಂದು ಅರಬ್ ದೇಶದ್ದು ಆಗಿದೆ. ವಿವಿಧ ಭಾಷೆಗಳನ್ನಾಡುವ ಜನರಿಗೆ, ವಿವಿಧ ಜನಾಂಗಗಳಿಗೆ ಸೇರಿದವರಿಗೆ ಒಂದೇ ರೀತಿಯಲ್ಲಿ ದೈವಿಕ ಮಾರ್ಗದರ್ಶನ ಲಭಿಸುತ್ತಾ ಇದೆ. ಈ ಮಾರ್ಗದರ್ಶನ ನೀಡುವವನು ಯಾರು? ನಿಶ್ಚಯವಾಗಿಯೂ ಅಲ್ಲಾಹನೇ ಈ ಮಾರ್ಗದರ್ಶನ ನೀಡುತ್ತಿದ್ದಾನೆ. ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಹೇಳಿದ್ದನು: **ಮೈಂ ತೇರೆ ಖಾಲಿಸ್ ಔರ್ ದಿಲೀ ಮುಹಿಬ್ಬೋಂಕಾ ಗುರೂಹ್ ಬಢಾಊಂಗಾ.** (ನಿನಗೆ ನಿಷ್ಠಾವಂತರಾದ ಮತ್ತು ಹೃತ್ಪೂರ್ವಕವಾಗಿ ನಿನ್ನನ್ನು ಪ್ರೀತಿಸುವವರ ಗುಂಪುಗಳನ್ನು ನಾನು ವರ್ಧಿಸುವೆನು).

ಮೊರಾಕೋ ದೇಶದ ಅಹ್ಮದಿ ಶುಕೂರ್ ಸಾಹಿಬ್ ತಾನು ಬೈಅತ್ ಮಾಡಿದ ಬಗ್ಗೆ ಹೀಗೆ ಹೇಳುತ್ತಾರೆ: ನಾನು **ಲಿಖಾ**

**ಮಅಲ್ ಅರಬ್** ಕಾರ್ಯಕ್ರಮವನ್ನು ನೋಡುತ್ತಾ ಅಹ್ಮದಿಯ್ಯತ್ ಬಗ್ಗೆ ತಿಳಿಯುತ್ತಾ ಇದ್ದಾಗ ನಾನು ಒಂದು ಸ್ವಪ್ನದಲ್ಲಿ ಹೀಗೆ ಕಂಡೆನು: ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ಪರ್ವತದ ತುದಿಗೆ ಸಾಗುತ್ತಿದ್ದ ಒಂದು ಮಾರ್ಗದಲ್ಲಿ ನಡೆಯುತ್ತಾ ಹೋಗುತ್ತಿದ್ದರು. ಅವರು ಬಿಳಿ ಬಣ್ಣದ ಪಾಕಿಸ್ಥಾನೀ ಪೋಷಾಕು ಧರಿಸಿದ್ದರು. ನಾನು ಅವರ ಹಿಂದೆ ನಡೆಯುತ್ತಾ ಪರ್ವತದ ತುದಿಗೆ ಸಮೀಪ ತಲಪಿರುವೆನು. ನಮಗೆ ಪರ್ವತದ ಶೃಂಗದ ಹಿಂಭಾಗದಿಂದ ಒಂದು ತೀವ್ರ ಪ್ರಕಾಶ ಕಾಣಿಸುತ್ತದೆ. ಅದು ದಿಗಂತದಲ್ಲಿ ಹರಡಿದೆ. ಅದು ಸೂರ್ಯೋದಯದ ಬೆಳಕಿನಂತೆ ತೋರುತ್ತದೆ. ನನಗೆ ಭಯವಾಗುತ್ತದೆ. ನನ್ನ ಪಾದಗಳು ಆಯಾಸಗೊಂಡಿರುತ್ತವೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಹೇಳುತ್ತಾರೆ. ನನ್ನನ್ನು ಹಿಂಬಾಲಿಸಿ ನಡೆಯುತ್ತಾ ಇರು. ಹೆದರಬೇಡ. ಅಲ್‌ಹಮ್ದುಲಿಲ್ಲಾಹ್, ಭಯ ಮತ್ತು ಅಪಾಯದ ಹೆದರಿಕೆ ಇದ್ದರೂ ನಾನು ಲಿಖಾ ಮಅಲ್ ಅರಬ್ ಕಾರ್ಯಕ್ರಮ ನೋಡುತ್ತಾ ಹುಝೂರರನ್ನು ಹಿಂಬಾಲಿಸುತ್ತಾ ಇದ್ದೆ. ಕೊನೆಗೆ ನಾನು ಅಹ್ಮದಿಯ್ಯತ್‌ಗೆ ಪ್ರವೇಶಿಸಿದೆ.

ಅಲ್‌ಜೀರಿಯಾದ ಡಾಕ್ಟರ್ ಎಅಜಾಝ್ ಕರೀಮ್ ಸಾಹಿಬ್ ಕೆಲವು ದಿನಗಳ ಹಿಂದೆ ಅಲ್ಲಿನ ಪರಿಸ್ಥಿತಿಯ ಕಾರಣ ಸೆರೆಮನೆ ವಾಸ ಅನುಭವಿಸಿದ್ದರು. ಅವರು ಹೇಳುತ್ತಾರೆ: ಮಸುಕಾದ ಇಸ್ಲಾಮೀ ತತ್ವಗಳ ಮತ್ತು ಪವಿತ್ರ ಖುರ್‌ಆನಿನ ತಪ್ಪು ವ್ಯಾಖ್ಯಾನದಿಂದ ನಾನು ತುಂಬಾ ನಿರಾಶನಾಗಿದ್ದೆ. ಮತಪಂಡಿತರ ತಪ್ಪು ವ್ಯಾಖ್ಯಾನಗಳನ್ನು ಆಲಿಸಿ ಇದು ದೇವವಚನವಾಗಿರಲು ಸಾಧ್ಯವೇ ಎಂದು ನಾನು ಯೋಚಿಸುತ್ತಿದ್ದೆ. ಹಾಗಿರಲಾಗಿ ಜೋರ್ಡನ್ ದೇಶದ ಒಬ್ಬ ಅಹ್ಮದಿ ಸ್ನೇಹಿತನ ಮೂಲಕ ಅಹ್ಮದಿಯ್ಯತ್ ಬಗ್ಗೆ ಮತ್ತು ಅಹ್ಮದಿಯಾ ಜಮಾಅತಿನ ಸ್ಥಾಪಕರ ಗ್ರಂಥಗಳ ಬಗ್ಗೆ ತಿಳಿಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ತಫ್ಸೀರ್ ಓದುವ ಮೊದಲು ನಾನು ನಫ್ಲ್ ನಮಾಝ್ ಮಾಡಿ ಪ್ರಾರ್ಥಿಸಿದೆ. ಅಲ್ಲಾಹನು ನನ್ನನ್ನು ನೇರ ಮಾರ್ಗದ ಕಡೆಗೆ ಮಾರ್ಗದರ್ಶನ ನೀಡಲಿ ಎಂದು ಬೇಡಿಕೊಂಡೆನು. ನಾನು ತಫ್ಸೀರ್ ಓದುತ್ತಾ ಮುಂದುವರಿದಾಗ ನನ್ನ ಹೃದಯ ತೆರೆಯುತ್ತಾ ಇತ್ತು. ಅವರ ನುಡಿಗಳ ಪ್ರಭಾವದಿಂದ ದೇಹದಲ್ಲಿ ಕಂಪನ ಉಂಟಾಗುತ್ತಿತ್ತು. ಇದು ಯಾವುದೇ ಮನುಷ್ಯನ ನುಡಿಗಳಲ್ಲ ದೈವಿಕ ಇಲ್‌ಹಾಮ್ ಎಂದು ಭಾಸವಾಯಿತು. ಆದರೆ ನಾನು ಬೈಅತ್ ಮಾಡುವ ಮೊದಲು ಇಸ್ತಿಖಾರ ಮಾಡಿದೆ. ಆಗ ನಾನು ಒಂದು ಸ್ವಪ್ನ ಕಂಡೆನು. ಅದರಲ್ಲಿ ನಾನು ನನ್ನ ಸ್ನೇಹಿತರೊಂದಿಗೆ ರಾತ್ರಿ ನಗರದಲ್ಲಿ ನಡೆದುಕೊಂಡು ಹೋಗುತ್ತಿದ್ದೇನೆ. ಒಂದು ಪ್ರಕಾಶ ನಮ್ಮೊಂದಿಗೆ ಬರುತ್ತಿದೆ. ಆಗ ಫೋನ್ ರಿಂಗ್ ಕೇಳಿಸಿತು. ನೋಡಿದಾಗ ಅದು ಹಝ್ರತ್ ಇಮಾಮ್ ಮಹ್‌ದಿ ಅಲೈಹಿಸ್ಸಲಾಮರ ಫೋನ್ ನಂಬರ್ ಎಂದು ತಿಳಿಯಿತು. ನಾನು ಹೀಗೆ ಯೋಚಿಸಿದೆ, ನಾನು ಅವರಿಗೆ ತಿರುಗಿ ಫೋನ್ ಮಾಡುವೆನು. ಅವರು ಫೋನಿಗೆ ಉತ್ತರ ನೀಡದಿದ್ದರೆ ಸತ್ಯ ಪ್ರವಾದಿ ಆಗಿದ್ದಾರೆ ಎಂದು. ಪ್ರವಾದಿ ಫೋನಿಗೆ ಉತ್ತರ ನೀಡುವುದಿಲ್ಲ ಎಂಬ ಯೋಚನೆ ಸ್ವಪ್ನದಲ್ಲಿ ನನಗುಂಟಾದುದು ಹೇಗೆಂದು ನನಗೆ ತಿಳಿಯದು. ಹಾಗೆ ನಾನು ಫೋನ್ ಮಾಡಿದೆ. ದೀರ್ಘಕಾಲ ರಿಂಗ್ ಕೇಳಿಸುತ್ತಾ ಇತ್ತು. ಆದರೆ ಅವರು ಫೋನ್ ಎತ್ತಲಿಲ್ಲ. ಅನಂತರ ಅವರು ನನ್ನ ಮುಂದೆ ಭಯ ಹುಟ್ಟಿಸುವ ರೀತಿಯಲ್ಲಿ ಕಾಣಿಸಿದರು. ನಾನು ಪವಿತ್ರ ಖುರ್‌ಆನಿನ ವಚನಗಳನ್ನೂ ಅಊಝುನ್ನೂ ಪಠಿಸಲು ಪ್ರಾರಂಭಿಸಿದೆ. ಮಹ್‌ದಿಯ ವಿಷಯ ಶೈತಾನನು ಸಂದೇಹಕರವಾಗಿ ಮಾಡದಿರಲಿ ಎಂಬ ಉದ್ದೇಶದಿಂದ ನಾನು ಹಾಗೆ ಮಾಡಿದೆ. ಅನಂತರ ನಾನು ಭಯದಿಂದ ಎಚ್ಚರಗೊಂಡೆ. ಅದು ಫಜರ್ ಸಮಯವಾಗಿತ್ತು. ಈ ಸ್ವಪ್ನ ಸತ್ಯವೆಂದು ನನಗೆ ದೃಢವಾಯಿತು. ನಾನು ಬೈಅತ್ ಮಾಡಿದೆ.

(ಹುಝೂರ್ ಇನ್ನೂ ಕೆಲವು ಘಟನೆಗಳನ್ನು ವಿವರಿಸಿ ಅನಂತರ ಹೇಳಿದರು:) ಅಲ್ಲಾಹನು ಜನರನ್ನು ಇಸ್ಲಾಮಿನ ನೈಜ ತತ್ವಗಳ ಕಡೆಗೆ ತರುತ್ತಿದ್ದಾನೆ. ಇನ್‌ಶಾಅಲ್ಲಾಹ್ ಮುಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕವೇ ನೈಜ ಇಸ್ಲಾಮ್ ಲೋಕದಲ್ಲಿ ಜಯಶಾಲಿಯಾಗುವುದು. ಅಲ್ಲಾಹನು ನಮಗೆಲ್ಲರಿಗೂ ಈ ಅನುಗ್ರಹದಿಂದ ಪಾಲು ಪಡೆಯಲು ಹಾಗೂ ಜನರನ್ನು ಅಲ್ಲಾಹನ ಕಡೆಗೆ ಕರೆಯಲು ಮತ್ತು ಆ ಬಗ್ಗೆ ಗಮನ ಹರಿಸುವಂತಾಗಲು ಭಾಗ್ಯ ನೀಡಿ ಅನುಗ್ರಹಿಸಲಿ – ಆಮೀನ್.

ಜುಮುಅ ನಮಾಝ್ ನಂತರ ಇಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು.

1. ಮುಕರ್ರಮ ಖುರ್‌ಶೀದ್ ರುಖಿಯ್ಯಾ ಸಾಹಿಬ. (ಮೌಲವಿ ಮನ್‌ಝೂರ್ ಅಹ್ಮದ್ ಗನೋ, ದರ್ವೇಶ್ ಖಾದಿಯಾನ್‌ರವರ ಪತ್ನಿ).

2. ಮುಕರ್ರಮ್ ಡಾಕ್ಟರ್ ಸಲಾಹುದ್ದೀನ್ ಸಾಹಿಬ್ ನ್ಯೂ ಜೆರ್ಸೀ, ಅಮೇರಿಕ. (ಇಂಡೋನೇಶಿಯಾದ ಮುಬಲ್ಲಿಗರಾಗಿದ್ದ ಮೌಲವಿ ಇಮಾಮುದ್ದೀನ್ ಸಾಹಿಬರ ಪುತ್ರ). ಸೆಪ್ಟೆಂಬರ್ ದಿನಾಂಕ 10ರಂದು ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

*****


***Friday Sermon delivered by Hadrath Khaleefatul Masih Al Khamis***(atba)

*At Masjid Baithul Futhuh, London. on 15-09-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon